ದುದ್ದು ಇಲ್ಲ ಎಂದು ಹೇಳುತ್ತಾರೆ. ಮೀನು ಪೌಷ್ಟಿಕ ಆಹಾರ, ಇದನ್ನು ಜನಗಳಿಗೆ ಒದಗಿಸಿ ಕೊಡುವುದಕ್ಕೆ ಕಾಯಕ್ರಮ ತೆಗೆದುಕೊಳ್ಳುತ್ತೀರಾ ?

ಉಪಾಧ್ಯಕ್ಷರು.—ಅದು ಈ ಪ್ರಶ್ನೆಯ ಪರಿಮಿತಿಯ ಹೊರಗೆ ಆಗುತ್ತದೆ.

10-00 A. M.

ಶ್ರೀ ವಿ. ಎನ್. ಪಾಟೀಲ್.—ಈ ಮೀನುಗಳ ಬರಗಾಲಕ್ಕೆ ಕಾರಣ ಕ್ಲೈಮೆಟಿಕಲ್ ಕಂಡಿಷನ್‌ನಿಂದ ಬಂದಿದೆಯೇ. ದೇಶದ ಬೇರೆ ಭಾಗಗಳಿಂದ ಬೇರೆ ಬೇರೆ ದೇಶದ ಜನರು ಬಂದು ಮೀನುಗಳನ್ನು ಹೆಚ್ಚಿಗೆ ಹಿಡಿಯುವುದರಿಂದ ಬರಗಾಲ ಉದ್ಭವಿಸಿತೇ ? ಬೇರೆಬೇರೆ ದೇಶಗಳಿಂದ ಬಂದು ಮೀನುಗಳನ್ನು ಹಿಡಿಯುವುದನ್ನು ತಪ್ಪಿಸುವುದಕ್ಕೆ ಸರ್ಕಾರ ವಿಚಾರಮಾಡಿದೆಯೇ ?

ಶ್ರೀ ಕೆ. ಟಿ. ಠಾಫೋಡ್.—ನಮ್ಮ ಕಾನೂನು ಪ್ರಕಾರ ಬೇರೆ ಕಡೆಯಿಂದ ನಮ್ಮ ನಮುದ್ರದ ಸಮೀಪಕ್ಕೆ ಬಂದು ಮೀನು ಹಿಡಿಯುವಂತಹ ಬೇಟೆಗಾರರಿಗೆ ಅಡಚಣೆ ಮಾಡುವಂತಹ ನಿರ್ಬಂಧಗಳು ಇಲ್ಲ. ಆ ತರಹ ನಿರ್ಬಂದ ಇರುವುದಕ್ಕೆ ಇದು ಎರ್ನಾ ರಾಷ್ಟ್ರಗಳಿಗೂ ಸಂಬಂಧ ಪಟ್ಟಿರುವುದರಿಂದ ಆ ಬಗ್ಗೆ ಬೇರೆ ವಿಚಾರ ವಿನಿಮಯ ನಡೆಯುತ್ತಿದೆ. ತಾವು ಹೇಳಿದ ರೀತಿಯಲ್ಲಿ ಇಂಥ ಕ್ಷಾಮ ಬರುವುದು 10 ವರ್ಷಗಳಿಗೆ ಒಮ್ಮೆ ಬರುತ್ತಾ ಇದೆ ಎಂದು ಗಮನಕ್ಕೆ ಬಂದಿದೆ. ಮೊದಲೇ ಈ ಸಭೆಗೆ ತಿಳಿಸಿದ್ದೇನೆ. 10 ವರ್ಷಗಳಿಗೊಮ್ಮೆ ಮೀನಿನಕ್ಷಾಮಾ ಬರಬೇಕಾದರೆ ಯಾವ ಕಾರಣದಿಂದ ಬರುತ್ತದೆ ಎನ್ನುವುದನ್ನು ಕೂಡ ಪರಿಶೀಲಿಸುವುದಕ್ಕೆ ನಾವು ಏನು ಒಂದು ಸಮಿತಿಯನ್ನು ನೇಮಿಸಿದ್ದೇವೆ ಆ ಸಮಿತಿಯವರು ನಮಗೆ ರಿಪೋರ್ಟು ಕೊಟ್ಟಿಲ್ಲ ಅವರು ರಿಪೋರ್ಟು ಕೊಟ್ಟ ನಂತರ ನಾನು ಹೇಳುತ್ತೇನೆ.

Mr. DEPUTY SPEAKER.—Expert opinion is that if there is failure of rain in June, that particular species do not lay their eggs in abundance and the percentage of fertilization also is poor. This ishappening forthe last so many years. That is the expert opinion till to-day.

SHORT NOTICE QUESTION AND ANSWER

Deaths due to Cholera in Shimoga District

25. Sri S. BANGARAPPA (Sorab).—

Will the Minister for Health be pleased to state : —

(*a*) whether it has come to the notice of Government that seven persons died due to cholera in Shimoga District ;

(*b*) whether it has come to the notice of Government that the same disease is still spreading to other places ;

(*c*) if so, the steps taken by Government to prevent this disease ?

Sri H. SIDDAVEERAPPA (Minister for Health).—

(*a*) Yes.

(*b*) Yes.

(*c*) The Health Authorities have performed a total of 31,000 Anti-Cholera Inoculations and disinfection of infected houses and

(SRI H. SIDDAVEERAPPA)

spraying of infected localitiee in addition to the super chlorination of water sources. The Deputy Commissioner has promulgated a notification under Section 76 of Mysore Public Health Act on 15th March 1973 prohibiting congregations and sale of cut fruits, meat, prepared food, etc., in unprotected manner within the city limits and closing down of hotels and cinema houses in the affected areas of the city. Meanwhile the Pubiic Health Department and Municipal Authorities have taken adequate steps for inoculation of people with Anti-cholera Vaccine and have ensured that adequate measures have been taken for strict supervision of hotels and eating houses in other parts of the City. There is no cause for anxiety, All effctive measures are undertaken to contain the epedemic.

ಶ್ರೀ ಎಸ್. ಬಂಗಾರಪ್ಪ.—ನಾನು ಪ್ರಶ್ನೆ ಕಳುಹಿಸಿದಾಗ ಶಿವಮೊಗ್ಗಾದಲ್ಲಿ ಚರುಳು ವ್ಯಾಧಿ ಇದೆಯೆಂದು ಸರ್ಕಾರ ಪ್ರಕಟಣೆ ಮಾಡಿತ್ತು. 7 ಜನ ಸತ್ತಾಗ ಪ್ರಶ್ನೆ ಕೊಟ್ಟಿದ್ದೆ. ಈಗ ಎಷ್ಟು ಜನ ಸತ್ತಿದ್ದಾರೆ ? ಇನಾಕ್ಯೂಲೇಷನ್ ಹಾಕುವುದು ಒಳ್ಳೆಯದಲ್ಲವೇ ? ಈಗೆ ಕಂಟ್ರೋರ್‌ನಲ್ಲಿ ಇದೆಯೇ ಅಥವಾ ಇಲ್ಲವೇ ?

† ಶ್ರೀ ಎಚ್. ಸಿದ್ದವೀರಪ್ಪ.—ಈಗ ಕಾಯಿಲೆ ಕಂಟ್ರೋಲ್‌ನಲ್ಲಿ ಇದೆ. ನನಗೆ ಬಂದಿರತಕ್ಕ ವರದಿ ಪ್ರಕಾರ ಆಗಲೇ ನಾನು ತಮಗೆ ತಿಳಿಸಿದ್ದೇನೆ. There were 35 suspected cases of gastro-enteritis. There wsre 12 deaths and during the last few days according to the report, there are no deaths.

ಶ್ರೀ ಎಸ್. ಬಂಗಾರಪ್ಪ.—ಬೆಂಗಳೂರು ನಗರ ಅಲ್ಲದೆ ಷಿಕಾರಿಪುರ, ಭದ್ರಾವತಿ ಹಾಗೂ ತರಿಕೆರೆ ಕಡೆಗೆ ಈ ರೋಗನಿಯಂತ್ರಿಸಿದೆ ಎಂದು ವರದಿ ಇದೆ ಆ ಕಡೆ ಇನಾಕ್ಯೂಲೇಷನ್ ಹಾಕತಕ್ಕ ಕಾರ್ಯಕ್ರಮ ಇದೆಯೇ, ಮುಂಜಾಗ್ರತೆ ಕಾರ್ಯಗ್ರಮಗಳು ನಡೆದಿವೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಈ ವಿಚಾರವನ್ನು ಸರ್ಕಾರದವರು ತೀವ್ರವಾಗಿ ಗಮನದಲ್ಲಿಟ್ಟುಕೊಂಡಿದ್ದೇವೆ ಈ ಬೇಸಿಗೆಯಲ್ಲಿ ಈ ಕರುಳುಬೇನೆ ಮತ್ತು ಕಾಲರಾ ಮುಂತಾದ ಕಾಯಿಲೆಗಳು ಹಬ್ಬುತಕ್ಕ ಅವಕಾಶಗಳು ಇವೆ ಏತಕ್ಕೆಂದರೆ ನೀರಿನ ಅನುಕೂಲ ಸಾಕಷ್ಟು ಇಲ್ಲದೆ ಇರುವುದರಿಂದ ಪ್ರಿವೆಂಟೀವ್ ಆಕ್ಷನ್ ಪ್ರಕಾರ ಸೆಡಿನೆನ್ ಸ್ಪ್ರಾಕ್ ಇಟ್ಟು ಕೊಂಡಿರುವುದು ಎಲ್ಲಾ ಕಡೆ ಅವುಗಳನ್ನು ಕೊಟ್ಟು ಪ್ರತಿಯೊಂದು ಬಿಲ್ಲೆಯಲ್ಲಿಯೂ ಸ್ಪ್ರಾಕ್ ಮಾಡಿದ್ದಾರೆ. ಅಂಟಿಸಿಪೀಟ್ ಮಾಡಿ ಇನಾಕ್ಯೂಲೇಷನ್ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲೆಲ್ಲಿ ಅನುಮಾನ ಬರುತ್ತದೆ ಅಲ್ಲಿ ತಕ್ಷಣ ಪ್ರಿವೆಂಟೀವ್ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಹಣ್ಣುಹಂಪಲುಗಳು, ತಿಂಡಿ ಪದಾರ್ಥಗಳು ಕೆಡದಹಾಗೆ ನೋಡುವುದಕ್ಕೆ ಕಾರ್ಯಕ್ರಮ ಕೈಕೊಂಡಿದ್ದೀರಾ ? ಇನ್ನು ಕೆಲವುಕಡೆ ಇಂತಹ ಪದಾರ್ಥಗಳನ್ನು ಮಾರುತ್ತಾ ಇದ್ದಾರೆ ಇದನ್ನು ಹತೋಟಿಗೆ ತರಬೇಕು. ಇದಕ್ಕೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ? ಅಲ್ಲಿನ ಡಿ. ಎಚ್. ಓ. ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ನಾನು ಅಪ್ರಿಷಿಯೇಟ್ ಮಾಡುತ್ತೇನೆ. ಇದರ ಬಗ್ಗೆ ಸೂಚನೆ ಕೊಟ್ಟರೆ ಸಂಪೂರ್ಣ ಕೆಲಸವಾಗಬಹುದು ಎಂದು ನಮ್ಮ ನಂಬಿಕೆ ಇದೆ.

ಶ್ರೀ ಎಚ್. ಸಿದ್ದವೀರಪ್ಪ.—ಜಿಲ್ಲಾಧಿಕಾರಿಗಳಿಗೆ ಈ ವಿಷಯದಲ್ಲಿ ತಿಳಿಸುತ್ತೇನೆ. ಮತ್ತು ಅವರು ಪೋಲೀಸ್ ಅಧಿಕಾರಿಗಳಿಗೆ ಸಹ ತಿಳಿಸಿ ಎಲ್ಲೆಲ್ಲಿ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು ಅದನ್ನೆಲ್ಲಾ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಮತ್ತು ಫುಡ್ ಇನ್ಸ್ಪೆಕ್ಟರ್ಸ್ ಮತ್ತು ಹೋಟೇಲ್‌ಗಳಲ್ಲಿ ಆಹಾರ ಪದಾರ್ಥಗಳನ್ನು ಸರಿಯಾದ ರೀತಿಯಲ್ಲಿ ಇಟ್ಟು ಇರತಕ್ಕಂಥಾದ್ದು ಇದನ್ನು ನಿಲ್ಲಿಸಲಕ್ಕೆ ಪ್ರಯತ್ನ ಇದ್ದಾರೆ, ಆ ರೀತಿ ಏನಾದರೂ ಹೆಚ್ಚುಕಡಿಮೆ ಆದರೆ ಸರಿಯಾದ ಕಾರ್ಯಕ್ರಮಗಳನ್ನು ಕಾನೂನು ಪ್ರಕಾರ ತೆಗೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತೇನೆ.

MADAM SPEAKER.—Now Question Hour is over.